# ಮುಂಜಾನೆ

ಮೂಡಲ ನೇಸರನು
ಮುಂಜಾನೆ ಬಾನ ಬೆಳಗುವನು
ಆಗ, ಚಿನ್ನದಂತೆ ಹೊಳೆಯುವುದು
ರೈತನ ಬಯಲುಗಳು.
ಎದ್ದೇಳುತಿವೆ ಹಕ್ಕಿಗಳು
ಹಾರುತಿವೆ ಬಾನಕೆ
ತನ್ನ ಗೂಡು ಬಿಟ್ಟು,
ಕೇಳುತಿದೆ ಕಾಡಿನಿಂದ
ನದಿಯ ಕಳಕಳ
ಹಕ್ಕಿಗಳ ಚಿಲಿಪಿಲಿ
ಜಲಪಾತದ ಧುಮುಧುಮು.

ಬರುತಿದೆ ಬೆಟ್ಟದಿಂದ
ತಂಪಾದ ಮುಂಜಾನೆ ಗಾಳಿ,
ಅರಳುತಿವೆ ಹೂಗಳು
ಎಲ್ಲೆಲ್ಲೂ ಹರಡುತಿದೆ
ಅದರ ಪರಿಮಳ.
ಮನೆಯಿಂದ ಹೊರಬಂದು
ಬಯಲಿಗೆ ಹೋಗುವನು
ನಮ್ಮೆಲ್ಲರ ಅನ್ನದಾತನು.
ಇದೆಲ್ಲ ನೋಡುತ
ಆ ಕೆಂಪಾದ ಬಾನದಿ
ನಗುತಿಹನು ಸೂರ್ಯನು.....

(Note: This page will be scanned to publish the article in schoolwiki. So, Write neatly. Don't fold paper. Don't write overleaf).